CW-07
PW-06

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಸ್ಪೇಷಲ್ .ಕೇಸ್(ಎಸ್.ಸಿ.ಎಸ್.ಟಿ.) ಸಂಖ್ಯೆ 488/2024

ದಿ. 26-03-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-07
ಫ್ರಾಸಾ-06

| | |
|---|---|
| ಸಾಕ್ಷಿದಾರರ ಹೆಸರು | ನಾಗರಾಜ |
| ತಂದೆಯ ಹೆಸರು | ಶರಣಪ್ಪ |
| ವಯಸ್ಸು | 38 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸಸ್ಥಳ | ಹೀರೆಬೂದೂರು |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ನನಗೆ ಚಾಸಾ-1 ಮತ್ತು 2 ಗೊತ್ತು.

2. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಸಹ ನನಗೆ ಗೊತ್ತು.

3. ಹೀರೆಬೂದೂರು ಗ್ರಾಮದಲ್ಲಿ ನನಗೆ ಸಂಬಂಧಿಸಿದ ಒಂದು ಕಿರಾಣಿ ಅಂಗಡಿ ಇರುತ್ತದೆ.

4. ಸದರಿ ಅಂಗಡಿಗಳ ಸಂಕೀರ್ಣ ನನ್ನ ಹೆಸರಿನಲ್ಲಿರುತ್ತದೆ.

CW-07
PW-06

5. ರೇಷನ್ ಅಂಗಡಿಯನ್ನು ನಡೆಸಲು ಚಾಸಾ-2 ಈತನಿಗೆ ಮಾತ್ರ ಬಾಡಿಗೆ ರೂಪದಲ್ಲಿ ಒಂದು ವರ್ಷದ ಹಿಂದೆ ಕೊಟ್ಟಿದ್ದೆನು.

6. ಈ ಪ್ರಕರಣದಲ್ಲಿ ನನಗೇನು ಮಾಹಿತಿ ಇರುವುದಿಲ್ಲ.

7. ಯಾವುದೇ ಘಟನೆಯನ್ನು ನಾನು ನೋಡಿರುವುದಿಲ್ಲ ಮತ್ತು ಬಿಡಿಸಿರುವುದಿಲ್ಲ.

8. ಯಾವ ಕಾಲಕ್ಕೂ ಯಾವುದೇ ರೀತಿಯಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ ಮತ್ತು ನನ್ನಿಂದ ಯಾವುದೇ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದ**

9. ಈಗ ನನಗೆ ಓದಿ ಹೇಳಿದ ನಿಪಿ-5 ರಂತೆ "ದಿಃ 25-07-2024 ರಂದು ಬೆಳಿಗ್ಗೆ 10 ಗಂಟೆ ಸುಮಾರಿಗೆ ನಾನು ನನ್ನ ಕಿರಾಣಪಿ ಅಂಗಡಿಯ

--------------------------------------------------------------------------------

--------------------------------------------------------------------------------

--------------------------------------------------------------------------------

--------------------------------------------------------------------------------

ಹಾಗೂ ತಮ್ಮಣ್ಣ ಇವರಿಗೆ ನಿಮ್ಮ ಊರಿಗೆ ಬಂದು ಸಾಯಿಸುತ್ತೇವೆ ಅಂತಾ ಜೀವದ

CW-07
PW-06

ಬೆದರಿಕೆ ಹಾಕಿ ಹೋದರು." ಎಂದು ದಿಃ 26-07-2024 ರಂದು ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂಬುದು ಸರಿಯಲ್ಲ.

10. ಈಗ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದು ಸೂಚಿಸುವುದು ಸರಿಯಲ್ಲ.

**ಪಾಟೀ ಸವಾಲು ಶ್ರೀ ಎಸ್.ಜಿ.ಕೆ. ವಕೀಲರಿಂದ ಆರೋಪಿತರ ಪರವಾಗಿಃ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಜಿ.ಡಿ.ಮಹಾವರ್ಕರ್)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.